**MARCH 24,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಕಲಬುರಗಿ ಜಿಲ್ಲೆಯಾದ್ಯಂತ, ಬೇಸಿಗೆ ಸಮಯದಲ್ಲಿ, ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಮುಂಜಾಗ್ರತೆ ವಹಿಸಿ, ಯೋಜಿಸಿಕೊಳ್ಳುವಂತೆ, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಸೂಚಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿ, ಪೂರ್ವ ಸಿದ್ಧತಾ ಸಭೆ ನಡೆಸಿದರು. ಅಫಜಲಪುರ ತಾಲೂಕಿನ, ಸೊನ್ನ ಬ್ಯಾರೇಜಿಗೆ ಒಳ ಹರಿವು ನಿಂತಿದ್ದು, ಪ್ರಸ್ತುತ ಸಂಗ್ರಹಗೊಂಡ ನೀರನ್ನೇ, ಜೂನ್ ತಿಂಗಳಾಂತ್ಯದ ವರೆಗೆ, ಕುಡಿಯುವ ಉದ್ದೇಶಕ್ಕಾಗಿ ಮಾತ್ರ, ಕಾಯ್ದಿರಿಸಿಕೊಳ್ಳುವಂತೆ, ನಾರಾಯಣಪುರ ಜಲಾಶಯದಿಂದ, ಸರಡಗಿ ಬ್ಯಾರೇಜಿಗೆ ನೀರು ಹರಿಸುವಂತೆ, ಪ್ರಾದೇಶಿಕ ಆಯುಕ್ತರಿಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು, ಜಿಲ್ಲಾಧಿಕಾರಿ ತಿಳಿಸಿದರು.**

<><><>

**ದಾವಣಗೆರೆ ಜಿಲ್ಲೆ, ಭದ್ರಾ ನಾಲೆಗಳಿಗೆ ಅಳವಡಿಸಿರುವ, ಅಕ್ರಮ ಪಂಪ್ ಸೆಟ್‌ಗಳ ತೆರವು ಕಾರ್ಯಾಚರಣೆ, ಚುರುಕುಗೊಂಡಿದೆ. ಭದ್ರಾ ನಾಲೆಗಳ ಕೊನೆ ಭಾಗದ, ಅಚ್ಚುಕಟ್ಟು ಪ್ರದೇಶಗಳಿಗೆ, ನೀರು ಸರಬರಾಜಾಗುತ್ತಿಲ್ಲ ಎಂದು, ರೈತರು ಸಲ್ಲಿಸಿದ ದೂರಿನ ಹಿನ್ನೆಲೆ, ಜಿಲ್ಲಾಧಿಕಾರಿ ತುರ್ತು ಕಾರ್ಯಪಡೆ ರಚಿಸಿ, ಆದೇಶ ಹೊರಡಿಸಿದ್ದಾರೆ. ನಾಲಾ ಅಧೀಕ್ಷಕ ಅಭಿಯಂತರ ಕೃಷ್ಣಮೂರ್ತಿ ನೇತೃತ್ವದಲ್ಲಿ, ಮಲೇಬೆನ್ನೂರು ಭಾಗದಲ್ಲಿ 20ಕ್ಕೂ ಅಧಿಕ ಅಕ್ರಮ ಪಂಪ್‌ಸೆಟ್‌ಗಳನ್ನು, ತುರ್ತು ಕಾರ್ಯಪಡೆ ವಶ ಪಡಿಸಿಕೊಂಡಿದೆ.**

<><><>

**ಧಾರವಾಡ ಜಿಲ್ಲೆಯ 35 ಗ್ರಾಮ ಪಂಚಾಯಿತಿಗಳು, ಕ್ಷಯ ಮುಕ್ತ ಗ್ರಾಮ ಪಂಚಾಯಿತಿ ಎಂದು ಘೋಷಣೆಯಾಗಿದೆ. ಆರೋಗ್ಯ ಇಲಾಖೆ ಹಾಗೂ ಗ್ರಾಮ ಪಂಚಾಯಿತಿಗಳ ಕಾಳಜಿ, ಬದ್ಧತೆಯಿಂದ ಈ ಕಾರ್ಯ ಸಾಧ್ಯವಾಗಿದೆ ಎಂದು ಜಿಲ್ಲಾ ಕ್ಷಯ ರೋಗ ನಿರ್ಮೂಲನ ಅಧಿಕಾರಿ ಡಾಕ್ಟರ ರವೀಂದ್ರ ಭೋವೇರ ತಿಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ಮಾಹಿತಿ ನೀಡಿದ್ದಾರೆ.**

<><><>

ಬೈಟ್: ಡಾ.ರವೀಂದ್ರ ಭೋವೇರ 37 ಸೆಕೆಂದುಗಳು

<><><>

ಹೊಸ ಪಿಂಚಣಿ ರದ್ದುಗೊಳಿಸಿ, ಹಳೆ ಪದ್ಧತಿ ಮರು ಜಾರಿಗೆ, ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ ತಿಳಿಸಿದ್ದಾರೆ. ದಾವಣಗೆರೆ ಜಿಲ್ಲೆ, ಚನ್ನಗಿರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಿಂಚಣಿದಾರರು ಹಾಗೂ ನೌಕರರ ಹಿತ ಕಾಪಾಡಲು, ಸರ್ಕಾರ ಬದ್ಧವಾಗಿದೆ ಎಂದರು. ಬರುವ ಶೈಕ್ಷಣಿಕ ವರ್ಷದಲ್ಲಿ, 13 ಸಾವಿರದ 500 ಶಿಕ್ಷಕರ ನೇಮಕಾತಿಗೆ, ಸಿದ್ಧತೆ ನಡೆದಿದೆ ಎಂದರು.

<><><>

ಶರಾವತಿ ಸಂತ್ರಸ್ಥರೇ ಹೆಚ್ಚು ವಾಸವಿರುವ, ಶಿವಮೊಗ್ಗ ಜಿಲ್ಲೆ, ಪುರದಾಳು ಗ್ರಾಮದಲ್ಲಿ, ಮೂರು ಕೋಟಿ ರೂಪಾಯಿ ವೆಚ್ಚದ, ಬಾರೇಹಳ್ಳ ಜಲಾಶಯದ ಕೋಡಿ ದುರಸ್ತಿಗೆ, ಸಚಿವ ಮಧು ಬಂಗಾರಪ್ಪ ಚಾಲನೆ ನೀಡಿದರು.

<><><>

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷ, ಮಲ್ಲಿಕಾರ್ಜುನ ಖರ್ಗೆ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು, ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು. ಮುಖ್ಯಮಂತ್ರಿ ಅವರು ಮೊಣಕಾಲು ನೋವಿನಿಂದ ಶೀಘ್ರ ಚೇತರಿಸಿಕೊಳ್ಳಲಿ ಎಂದು, ಹಾರೈಸಿದರು. ಪ್ರಸ್ತುತ ರಾಜ್ಯದ ರಾಜಕೀಯ ಬೆಳವಣಿಗೆಗಳು ಹಾಗೂ ಪಕ್ಷದ ವಿವಿಧ ಆಂತರಿಕ ವಿಚಾರಗಳ ಬಗ್ಗೆ ಚರ್ಚೆ ನಡೆಯಿತು ಎಂದು ವರದಿಯಾಗಿದೆ.

<><><>

ಆಕಾಶವಾಣಿಯ ಬಹುಶ್ರುತ ಕಾರ್ಯಕ್ರಮ, 'ಮನ್ ಕಿ ಬಾತ್' ಮೂಲಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇದೇ 30, ಬರುವ ಭಾನುವಾರದಂದು, ಬೆಳಗ್ಗೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಮಾತನಾಡಲಿದ್ದಾರೆ. ಇದು ಮನದ ಮಾತಿನ 120ನೇ ಸಂಚಿಕೆಯಾಗಿದೆ.

<><><>

ಸಮಾಜದ ಬಹು ಮುಖ್ಯ ಭಾಗವಾಗಿರುವ ಸಮೂಹ ಮಾಧ್ಯಮವು ಸಮಾಜಕ್ಕೆ ಸುದ್ದಿ ತಲುಪಿಸುವ ಮಹತ್ವದ ಜವಾಬ್ದಾರಿಯನ್ನು ಹೊಂದಿದೆ. ಪತ್ರಕರ್ತರು ಸುದ್ದಿಯ ಸತ್ಯಾಸತ್ಯತೆ ಅರಿತು ಕರ್ತವ್ಯ ನಿರ್ವಹಿಸುವುದು ಮಹತ್ವದ ಅಂಶವಾಗಿದೆ ಎಂದು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ ತಿಮ್ಮಾಪುರ ಹೇಳಿದರು. ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲೂಕು ನೀರಬೂದಿಹಾಳದಲ್ಲಿ ಜರುಗಿದ 12 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನದಂದು ನಡೆದ "ಸಮೂಹ ಮಾಧ್ಯಮ: ಸಮಸ್ಯೆ-ಪರಿಹಾರ" ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

<><><>

ರಾಜ್ಯದಲ್ಲಿ 19 ಸಾವಿರ ನೋಂದಾಯಿತ ಕಾರ್ಖಾನೆಗಳಿದ್ದು, ಆ ಪೈಕಿ ಒಂದು ಸಾವಿರ ಅಪಾಯಕಾರಿ ಹಾಗೂ 90 ಅತಿ ಅಪಾಯಕಾರಿ ಕೈಗಾರಿಕೆಗಳಿವೆ ಎಂದು, ಕೈಗಾರಿಕಾ ಸುರಕ್ಷತಾ ಇಲಾಖೆಯ, ಮೈಸೂರು ವಿಭಾಗದ ಜಂಟಿ ನಿರ್ದೇಶಕ, ನರೇಂದ್ರಬಾಬು, ಮಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಭಾರತ ಚುನಾವಣಾ ಆಯೋಗ, ಏಪ್ರಿಲ್ 1 ರಂದು, ಮತದಾರರ ಪಟ್ಟಿಯಲ್ಲಿ ಹೆಸರು ನೊಂದಣಿ ಹಾಗೂ ತಿದ್ದುಪಡಿಗೆ ಅವಕಾಶ ಕಲ್ಪಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>